11

# ಪಂಚಾಶತ್ತಮ ಹಾಗೂ ಅದರ ನಂತರ

## (ಅಪೊಸ್ತಲರ ಕೃತ್ಯಗಳು 2)

ಯೇಸು ಕ್ರಿಸ್ತನು ಕ್ರೂಜಿತನಾಗಿ ಐವತ್ತು ದಿವಸಗಳ ನಂತರ ಹಾಗೂ ಪರಲೋಕಕಕ್ಕೆ ಏರಿಹೋದ ಹತ್ತು ದಿನಗಳ ನಂತರ ಅಪೊಸ್ತಲರ ಕೃತ್ಯಗಳು 2 ರಲ್ಲಿ ಉಂಟಾದ ಪಂಚಾಶತ್ತಮ ಹಬ್ಬದ ಕುರಿತು ದಾಖಲಿಸಲಾಗಿದೆ. ಪಂಚಾಶತ್ತಮವು ಒಂದು ಸುಗ್ಗಿಯ ಹಬ್ಬವಾಗಿತ್ತು, ಹೊಲದಲ್ಲಿ ಬೆಳೆದ ಪ್ರಥಮ ಫಲದ ಹಬ್ಬವಾಗಿತ್ತು, ನಂತರದಲ್ಲಿ ಸೀನಾಯಿ ಬೆಟ್ಟದಲ್ಲಿ ದಾಶಾಜ್ಞೆಗಳನ್ನು ದೊರಕಿಸಿಕೊಂಡ ವಿಚಾರಕ್ಕೆ ಸಂಬಂಧಪಟ್ಟಿತು (ಏಕೆ ಮತ್ತು ಹೇಗೆ ಎಂಬುದು ಯಾರಿಗೂ ತಿಳಿದಿರುವದಿಲ್ಲ). ಇಸ್ರಾಯೇಲ್ಯರ ಹಾಗೂ ದೇವರೊಂದಿಗಿನ ಒಡಂಬಡಿಕೆಯ ಸಮಯಕ್ಕೆ ಮೀಸಲಾಯಿತು. ಅಪೊಸ್ತಲರ ಕೃತ್ಯಗಳು 2ರ ಪಂಚಾಶತ್ತಮ ದಿನವು, ಆದಿ ಕ್ರೈಸ್ತರ ಅಭಿವೃದ್ಧಿಗೆ ನಾಂದಿಯಾಯಿತು. ಇದರ ಪರಿಣಾಮ ಎಷ್ಟಿದೆಯೆಂದರೆ, ಅಪೊಸ್ತಲರ ಕೃತ್ಯಗಳು 2ರಲ್ಲಿ ಸತ್ಯವೇದದ ಪ್ರಕಟನೆಗಳನ್ನು ತಿಳಿದುಕೊಳ್ಳಬಹುದಾಗಿದೆ.

ಈ ನಿರ್ಧಿಷ್ಟವಾದ ಪಂಚಾಶತ್ತಮ ಏಕೆ ಪ್ರಮುಖವಾಯಿತು? ಪಂಚಾಶತ್ತಮದ ವಿಶೇಷತೆ ಆದರೂ ಏನು?

ಈ ಪ್ರಶ್ನೆಗಳಿಗೆ ಎರಡು ಪ್ರತಿಕ್ರಿಯೆಗಳಿವೆ. ಪಂಚಾಶತ್ತಮವು ಪವಿತ್ರಾತ್ಮನ ಬರುವಿಕೆಯ ದಿನವಾಯಿತು ಎಂದು ಕೆಲವರು ಉತ್ತರ ನೀಡಬಹುದು, ಮತ್ತು ಅನ್ಯಭಾಷೆಯನ್ನು ಸ್ವೀಕರಿಸಿದ ದಿನ ಎಂದು ಹೇಳುವರು. ಈ ವಿಶೇಷವಾದ ವರವನ್ನು ಪಡೆದದ್ದರಿಂದ, ಅದನ್ನು ಹೊಂದಿಕೊಂಡವರು ತಮ್ಮನ್ನು "ಪೆಂತಕೋಸ್ಟ್" ಹಾಗೂ ಪೆಂತಕೋಸ್ಟ್ ಸಮಾಜದವರು ಎಂದು ಕರೆದು ಕೊಂಡಿರುವರು.

ಅಪೊಸ್ತಲರ ಕೃತ್ಯಗಳು 2ರಲ್ಲಿರುವ ಪಂಚಾಶತ್ತಮವು "ಆದಿ ಸಭೆಯ ಜನನ" ಎಂಬುದು ಸಹಜವಾದ ಉತ್ತರವಾಗಿದೆ. ಸಭೆಯು ಅಧಿಕೃತಗೊಂಡ ದಿನ.

ಈ ಅಧ್ಯಾಯವನ್ನು ಓದುವಾಗ ಈ ಎರಡು ಪ್ರಸ್ತಾಪಗಳೂ ಪ್ರಮುಖವಾಗಿವೆ, ಮತ್ತು ಅದರಲ್ಲಿ ಆಸಕ್ತಿ ಇರುತ್ತದೆ. ಆದರೆ ಈ ಎರಡು ಸಂಗತಿಗಳಿಗೂ, ಈ ಅಧ್ಯಾಯದಲ್ಲಿ ಒತ್ತು ನೀಡಿರುವದಿಲ್ಲ. ಅಪೊಸ್ತಲರ ಕೃತ್ಯಗಳು 2ರಲ್ಲಿ ಯೇಸು ಕ್ರಿಸ್ತನು ನೀಡುವ ರಕ್ಷಣೆಯ ವಿಚಾರವೇ ಪ್ರಮುಖವಾಗಿದೆ. ಸಂಪೂರ್ಣವಾದ ಸುವಾರ್ತೆಯನ್ನು ಈ ಪಂಚಾಶತ್ತಮ ದಿನದಂದು ಪ್ರಥಮವಾಗಿ ಪ್ರಸಂಗ ಮಾಡಿರುವದರಿಂದ, ಈ ದಿನವು ಬಹು ಪ್ರಮುಖವಾಗಿದೆ. ಯೇಸು ಕ್ರೂಜಿತನಾಗಿ, ಪುನರುತ್ಥಾನ ಹೊಂದಿ ತಂದೆಯ ಬಳಿಗೆ ಏರಿ ಹೋದ ನಂತರ, ಅಪೊಸ್ತಲರ ಕೃತ್ಯಗಳು 2ರಲ್ಲಿ, ಸಂಪೂರ್ಣ ಸುವಾರ್ತೆಯನ್ನು ಮೊದಲ ಬಾರಿ ಸಾರಲಾಯಿತು.

ಯೇಸುವಿನ ಸಾರೋಣದಲ್ಲಿ ಪರಿಶುದ್ಧಾತ್ಮನ ಆಗಮನ ಹಾಗೂ ಸಭಾ ಸ್ಥಾಪನೆಯು ಒಳಗೊಂಡಿರುತ್ತದೆ. ಪವಿತ್ರಾತ್ಮನ ಆಗಮನವು ಯೇಸುವಿನ ಸುವಾರ್ತೆಯನ್ನು ಸಾರಲು ಬಲವನ್ನು ನೀಡಿತು, ಈ ಸಾರೋಣದಿಂದ ಸಭಾಸ್ಥಾಪನೆಯಾಯಿತು. ಅಪೊಸ್ತಲರ ಕೃತ್ಯಗಳು 2ರಲ್ಲಿ ಪಂಚಾಶತ್ತಮದ ಘಟನಾವಳಿಗಳು ಇದ್ದರೂ, ಸುವಾರ್ತಾ ಸಂದೇಶವೇ ಪ್ರಮುಖ ಪ್ರಮುಖವಾಗಿದೆ.

### ಪವಿತ್ರಾತ್ಮನ ಆಗಮನದಿಂದ: ಸುವಾರ್ತಾ ಸಾರೋಣಕ್ಕೆ ಶಕ್ತಿ ಒದಗಿತು (2:1-21)

ಯೇಸು ಪರಲೋಕಕ್ಕೆ ಏರಿಹೋಗುವ ಮೊದಲು ತನ್ನ ಅಪೊಸ್ತಲರಿಗೆ, "... ಅತಿ ಶೀಘ್ರದಲ್ಲಿಯೇ ನೀವುಗಳು ಪವಿತ್ರಾತ್ಮನ ಬೆಂಕಿಯಿಂದ ದೀಕ್ಷಾಸ್ನಾನ ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 1:5) ಅಂದನು. ಮತ್ತು ಆತನು ಅವರಿಗೆ, "ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ, ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು" (1:8). ಪುನರುತ್ಥಾನ ಹೊಂದಿದ ಯೇಸುವನ್ನು ಪ್ರಕಟಿಸಲು ಅಪೊಸ್ತಲರು ಆತ್ಮನ ಬಲವನ್ನು ಹೊಂದಿಕೊಳ್ಳಬೇಕಿತ್ತು (ಆತ್ಮನ ಮೂಲಕವಾಗಿ ಅವರು ಮುಳುಗುವ ದೀಕ್ಷಾಸ್ನಾನವನ್ನು ಹೊಂದುವದಕ್ಕಿದ್ದರು).

ಅಪೊಸ್ತಲರ ಕೃತ್ಯಗಳು 2:1-13ರಲ್ಲಿ ಇದು ಬಂದ ವಿವರಣೆಯನ್ನು ನೋಡುತ್ತೇವೆ. ಅಪೊಸ್ತಲರೆಲ್ಲರು ಒಂದು ಕೋಣೆಯಲ್ಲಿ ಸೇರಿ ಬಂದಿರುವಾಗ, "ಉರಿಯಂತಿದ್ದ ನಾಲಿಗೆಗಳು" (ವಚನ 3) ವಿಂಗಡಿಸಿಕೊಳ್ಳುವ ಹಾಗೆ "ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು" (ವಚನ 4). ಈ ಘಟನೆಯ ನಿಮಿತ್ತ, ಒಂದು ದೊಡ್ಡ ಗುಂಪು ಅಲ್ಲಿ ಬಂದು ಸೇರಿತು. ಆಗ ಅಪೊಸ್ತಲರೆಲ್ಲರೂ ಹೊರಗೆ ಬಂದರು, ಆಗದ್ದಲವು ಏಕೆ ಉಂಟಾಯಿತು ಎಂದು ಜನರು ತಿಳಿದಾಗ, ಅಲ್ಲಿ ಕೂಡಿದ್ದವರೊಂದಿಗೆ ಪೇತ್ರನು ಮಾತನಾಡಿದನು. ಆಗ ಆ ಗುಂಪಿನೊಳಗೆ ಗುರುತರವಾದ ಒಂದು ಗೊಂದಲ ಉಂಟಾಯಿತು. ಪ್ರತಿಯೊಬ್ಬನು, ಅಪೊಸ್ತಲರು ತಮ್ಮದೇ ಆದ ಭಾಷೆಯನ್ನಾಡುವದನ್ನು ಕೇಳಿಸಿ ಕೊಂಡರು. ಅಪೊಸ್ತಲರೆಲ್ಲರೂ ಗಲಿಲಾಯದವರಾಗಿದ್ದು, ಅವರಿಗೆ ಇತರೆ ಯಾವುದೇ ವಿಧವಾದ ಭಾಷೆಗಳು ಬರುತ್ತಿರಲಿಲ್ಲ. ಅಲ್ಲಿ ಸೇರಿಬಂದಿದ್ದ ವಿವಿಧ ದೇಶಗಳ ಜನರ ಹೆಸರನ್ನು ಲೂಕನು ದಾಖಲಿಸಿರುವನು, ಪಸ್ಕ ಹಾಗೂ ಪಂಚಾಶತ್ತಮದ ಹಬ್ಬವನ್ನು ಆಚರಣೆ ಮಾಡಲು ಬಂದಿದ್ದ ದೇಶಗಳವರನ್ನು ಕುರಿತು ದಾಖಲಿಸಿರುವನು, "ಅಪೊಸ್ತಲರು ನಮ್ಮ ನಮ್ಮ ಭಾಷೆಗಳಲ್ಲಿ ಇವರು ದೇವರ ಮಹತ್ತುಗಳನ್ನು ಹೇಳುವದನ್ನು ಕೇಳುತ್ತಿದ್ದೇವೆ" ಅಂದರು (ಅಪೊಸ್ತಲರ ಕೃತ್ಯಗಳು 2:11). ಈ ಘಟನೆಗೆ ಕಾರಣವೇನೆಂದು ಅನೇಕರು ಚರ್ಚಿಸುತ್ತಿದ್ದರು, ಆದರೆ ಬೇರೆ ಕೆಲವರು ಇವರು ಮಧ್ಯಪಾನ ಮಾಡಿ ಮತ್ತರಾಗಿದ್ದಾರೆಂದು ಹಾಸ್ಯಮಾಡಿದರು.

ಈ ಸಂಗತಿಗಳನ್ನು ಯಾವ ವಿಧದಲ್ಲಿ ಅನುವಾದ ಮಾಡೋಣ? ಕೇವಲ ಅನ್ಯಭಾಷೆಯ ವರವನ್ನು ನೀಡುವದಕ್ಕಾಗಿ ಮಾತ್ರ ಪವಿತ್ರಾತ್ಮನು ಬರಲಿಲ್ಲ. ಆತ್ಮನ ಬರೋಣದೊಂದಿಗೆ, ಹೆಚ್ಚಿನ ಎರಡು ಅಂಶಗಳನ್ನು ನೀಡಲಾಯಿತು ಎಂಬ ಸೂಚನೆಯನ್ನು ವಚನ 2 ಮತ್ತು 3ರಲ್ಲಿ ನೋಡುತ್ತೇವೆ (ಬಿರುಗಾಳಿ ಮತ್ತು ಉರಿಯಂತಿದ್ದ ನಾಲಿಗೆಗಳು[1]). ಅನ್ಯಭಾಷೆಯ ಮೇಲೆ ಹೆಚ್ಚು ಒತ್ತು ನೀಡುವ ಅಗತ್ಯವಿಲ್ಲ. ಎರಡನೆಯದಾಗಿ, ದೇವರ ಆತ್ಮನ ಪುರಾವೆಯಾಗಿ ಅನ್ಯಭಾಷೆ ಉಂಟಾಯಿತು, ಅದು ಅಲ್ಲಿಗೆ ಅಂತ್ಯಗೊಳ್ಳಲಿಲ್ಲ. ಆದ್ದರಿಂದ ಅಪೊಸ್ತಲರು ಮಾತನಾಡಿದ ಭಾಷೆಯ ಬಗ್ಗೆಯೂ (ಬೆಂಕಿ ಹಾಗೂ ಬಿರುಗಾಳಿಯ ಸಂಗಡ) ಪೇತ್ರನು ಜನರಿಗೆ ಅರ್ಥವನ್ನು ತಿಳಿಸಬೇಕಾಯಿತು. ಯೋವೇಲನ ಪ್ರವಾದನೆಯು (ಯೋವೇಲ 2:28-32) ನೆರವೇರಿದ ವಿವರಣೆಯನ್ನು ಪೇತ್ರನು ವಿವರಿಸುವವರೆಗೆ, ಅಲ್ಲಿ ನಡೆಯುತ್ತಿದ್ದ ಘಟನೆಗಳನ್ನು ಜನರು ಅರಿಯಲು ಅಸಾಧ್ಯವಾಯಿತು. ಅಪೊಸ್ತಲರು ಅನ್ಯ ಭಾಷೆಯಾಡುತ್ತಿದ್ದರಿಂದ, ಅದು ವಿಶೇಷವಾದ ಸೂಚನೆಯನ್ನು ಹೊಂದಿತ್ತು.

ಅನ್ಯಭಾಷೆಗಾಗಿ ಮಾತ್ರ ಆತ್ಮವನ್ನು ಸುರಿಸದೆ, ಇದ್ದರೆ, ಬೇರೆ ಯಾವ ಸಂಗತಿಗಾಗಿ ಸುರಿಯಲ್ಪಟ್ಟಿತು? *ಮೊದಲನೆಯದಾಗಿ, ಅವರು ಯೇಸುವಿನ ಪುನರುತ್ಥಾನದ ಸಾಕ್ಷಿಗಾಗಿ ಸುರಿಯಲ್ಪಟ್ಟಿತು.* ಸುವಾರ್ತೆಗಳ ನಂತರ, ಅಪೊಸ್ತಲರು ತಾವು ನೀಡುತ್ತಿದ್ದ ಸಾಕ್ಷಿಯ ವಿಚಾರದಲ್ಲಿ ಗೊಂದಲಕ್ಕೊಳಗಾಗಿ ಅಧೈರ್ಯಗೊಂಡಿದ್ದರು (ಲೂಕ 24:19-21; ಅಪೊಸ್ತಲರ ಕೃತ್ಯಗಳು 1:6, 7). ಪುನರುತ್ಥಾನದ ನಂತರ ಯೇಸು ಅವರಿಗೆ ತೋರ್ಪಡಿಸಿಕೊಂಡ ವಿಚಾರವು ಸಹ, ಅವರ ಸೇವೆಗೆ ಯಾವುದೇ ಸ್ಪಷ್ಟೀಕರಣವನ್ನು ನೀಡಿರುವದಿಲ್ಲ, ಅಥವಾ

ಅವರಿಗೆ ಧೈರ್ಯವನ್ನು ಹಾಗೂ ಸಾಮರ್ಥ್ಯವನ್ನೂ ನೀಡಿರಲಿಲ್ಲ. ಹೇಗೂ, ಯೇಸು ಅವರಿಗಾಗಿ ನೀಡುವ ಆತ್ಮನು ಅವರನ್ನು "ಸಕಲ ಸತ್ಯಕ್ಕೆ ನಡೆಸುವದೆಂದು" ಮತ್ತು ಮುಂದೆ ಬರುವಂಥದ್ದನ್ನು ಪ್ರಕಟಪಡಿಸುವದೆಂದು ಆತನು ವಾಗ್ದಾನ ಮಾಡಿದ್ದನು (ಯೋಹಾನ 16:13). ಪಂಚಾಶತ್ತಮದಿನದಂದು ಪವಿತ್ರಾತ್ಮನು ಬಂದ ಕಾರಣದಿಂದ, ಅಪೊಸ್ತಲರು ಯೇಸುವನ್ನು ಶೂಲುಜಿತನಾಗಿ ಪುನರುತ್ಥಾನ ಹೊಂದಿದವನೆಂದು ಧೈರ್ಯವಾಗಿ ಪ್ರಕಟಿಸಿದರು. ಇಂಥಹ ಅನುಭವವನ್ನು ಅವರು ಈ ಹಿಂದೆ ಹೊಂದಿರಲಿಲ್ಲ; ಸ್ವಾಭಾವಿಕವಾಗಿ ಅವುಗಳನ್ನು ವಿವರಿಸಲು ಅಸಾಧ್ಯ (2:36; ಪೇತ್ರನ ಧೈರ್ಯದ ಪ್ರಕಟನೆ).

*ಎರಡನೆಯದಾಗಿ, ಆತ್ಮನ ಬರುವಿಕೆಯ ಮುಖಾಂತರ ಇಸ್ರಾಯೇಲ್ಯರ ಮರುಸ್ಥಾಪನೆಗೆ ಸಹಾಯವಾಯಿತು.* ಪಂಚಾಶತ್ತದ ಘಟನೆಯನ್ನು ವಚನ 16 ರಿಂದ 21ರ ವರೆಗಿನ ಭಾಗವನ್ನು ಯೋವೇಲನಿಂದ ವ್ಯಾಖ್ಯಾನಿಸಿ ಪೇತ್ರನು ವಿವರಿಸಿದನು. ಈ ವ್ಯಾಖ್ಯಾನದ ಪೂರ್ಣ ವಿವರಣೆಯನ್ನು ತಿಳಿಯಬೇಕಾದರೆ, ಯೋವೇಲ ಗ್ರಂಥವನ್ನು ಪೂರ್ಣವಾಗಿ ಓದಬೇಕು ನೈತಿಕ ಮಟ್ಟವನ್ನು ಮೀರಿ ಸೋತು ಹೋಗಿದ್ದ ಇಸ್ರಾಯೇಲ್ಯರಿಗಾಗಿ ಇದು ಪ್ರವಾದನ ವಾಕ್ಯವಾಗಿತ್ತು, ದೇವರು ಅವರನ್ನು ಮರೆತಿರುವದಿಲ್ಲ ಎಂಬ ಸಂದೇಶವು ಅದರಲ್ಲಿ ಅಡಗಿತ್ತು. ಭವಿಷ್ಯತ್ತಿನಲ್ಲಿ ಅವರಿಗೆ ಪುನಶ್ಚೇತನ ಇದೆ ಎಂಬ ಅಂಶವು ಅದರಲ್ಲಿತ್ತು. "ಕಡೇ ದಿವಸಗಳಲ್ಲಿ" ಪುನಶ್ಚೇತನದ ಸ್ಥಾಪನೆಯು ಉಂಟಾಗುವದಿತ್ತು (ಅಪೊಸ್ತಲರ 2:17; ಯೋವೇಲ 2:28 ಇದಾದ ನಂತರ ಎಂದಿರುತ್ತದೆ), ಇದು ದೇವರ ಆತ್ಮನ ಬರೋಣದಿಂದ ಹಾಗೂ "ಆತ್ಮನು" ಎಲ್ಲರಿಗೂ ಒದಗುವ ಮೂಲಕ ಈ ಕಾರ್ಯವು ಉಂಟಾಗುವದಿತ್ತು.

ಪುನಃ ಸ್ಥಾಪನೆಯ ದಿವಸದಲ್ಲಿ ಈ ಪ್ರವಾದನೆಯು ಪುನಶ್ಚೇತನವಾಗುವದಿತ್ತು. ಹಾಗು ಒಡಂಬಡಿಕೆಗಳ ನಡುವಿನ ಕಾಲದಲ್ಲೂ (ಹಳೆ ಒಡಬಡಿಕೆಯ ಅಂತ್ಯದಲ್ಲಿ ಮತ್ತು ಯೇಸುವಿನ ಬರೋಣದ ಅಧಿಯಲ್ಲಿ), ಪ್ರವಾದನೆಗಳ ಸಮಯವು ಅಂತ್ಯವಾಯಿತು ಎಂದು ಮತಾವಲಂಬಿಗಳು ನಂಬಿದ್ದನು. ಇಂಥಹ ದೇವರೊಂದಿಗಿನ ಸಂಭಾಷಣೆಯು ಮೆಸ್ಸೀಯನು ಬರುವಾಗ ಮತ್ತು ಆತ್ಮನ ಸುರಿಸುವಿಕೆಯ ಸಮಯದಲ್ಲಿ ಮಾತ್ರ ಪರಿಣಾಮವನ್ನು ಹೊಂದಿರುತ್ತಿತ್ತು ಎಂಬ ನಂಬಿಕೆಯಿದೆ. ಹಳೆ ಒಡಂಬಡಿಕೆಯಲ್ಲಿ, ಪವಿತ್ರಾತ್ಮನ ವರಗಳು ವಿರಳವಾಗಿದ್ದವೇ, ವಿನಃ ಕಡ್ಡಾಯವಾಗಿರಲಿಲ್ಲ. "ಸಾಮಾನ್ಯವಾಗಿ ಅನೇಕ ಇಸ್ರಾಯೇಲ್ಯರು ಆತ್ಮನನ್ನು ಹೊಂದಿರಲಿಲ್ಲ, ಆದರೆ ಈಗಿನ ಕಾಲದ ಪ್ರತಿ ಕ್ರೈಸ್ತರೂ ಹೊಂದಿರುವರು." ಆತ್ಮನ ಬಲವನ್ನು ಅರಸುಗಳಿಗೂ, ಪ್ರವಾದಿಗಳಿಗೂ, ಮತ್ತು ನ್ಯಾಯ ಸ್ಥಾಪಕರುಗಳಿಗೂ, ಅವರ ಕೆಲಸದ ಸಾಮರ್ಥ್ಯವನ್ನು ವೃದ್ಧಿಗೊಳಿಸಲು ನೀಡಲಾಗಿತ್ತು. ಹೇಗೂ ಯೋವೇಲನು ಆತ್ಮನನ್ನು ಎಲ್ಲರಿಗಾಗಿ ನೀಡಲಾಗಿದೆ ಎಂದು ಪ್ರಕಟಿಸಿದನು, ಅದೇ ವಿಧವಾಗಿ ಆ ಸಮಯವು ಹತ್ತಿರವಾಯಿತು ಎಂದು ಪೇತ್ರನು ತಿಳಿಸಿದನು. ದೇವರು ಒಂದು ಹೊಸ ಕಾರ್ಯವನ್ನು ಮಾಡುತ್ತಿದ್ದನು. ಅಪೊಸ್ತಲರ ಕೃತ್ಯಗಳು 2:39 ಈ ಭಕ್ತಿ ಕಾರ್ಯವು ಇಸ್ರಾಯೇಲ್ಯರಿಗೆ ಮಾತ್ರ ಮೀಸಲಾಗಿರದೆ, ಅದು "ಆತ್ಮೀಕ ಇಸ್ರಾಯೇಲ್ಯರಿಗಾಗಿತ್ತು," ಇದರಲ್ಲಿ ಅನ್ಯರು ಸಹ ಒಳಗೊಂಡಿರುವರು, ಮತ್ತು ಯೆಹೂದ್ಯರೂ ಒಳಗೊಂಡಿರುವರು. "ದೂರದಲ್ಲಿರುವವರಿಗೂ" ಅಂದರೆ ಅನ್ಯರಿಗೆ ಎಂಬುದೇ ಏಕೆಂದರೆ ಅವರು ದೇವರಿಂದ ದೂರವಿರುವವರೇ (ನೋಡಿರಿ ಎಫೆಸ 2:12, 13).

ಪವಿತ್ರಾತ್ಮನ ಬರೋಣವು ಪ್ರಮುಖವಾಗಿರುವಂತೆಯೇ, ಪಂಚಾಶತ್ತಮವು ಇಲ್ಲಿಗೆ ಕೊನೆಗೊಳ್ಳುವದಿಲ್ಲ. ಆತನ ಸಂಡ ಒದಗಿಸಲ್ಪಟ್ಟ ಸಂಗತಿಗಳು ಜನರನ್ನು ಆಕರ್ಷಿಸಿದಾಗ ಪೇತ್ರನು ಈ ವಿಚಾರದಕುರಿತು ಜನರೆಲ್ಲರಿಗೆ ವಿವರಣೆಯನ್ನು ನೀಡಿದ್ದನು. ಯೇಸುವಿನಲ್ಲಿರುವ ರಕ್ಷಣೆಯನ್ನು ಜನರಿಗೆ ತಿಳಿಸುವದಕ್ಕೆ ಈ ಸಂದರ್ಭವನ್ನು ಬಳಸಿದನು.

## ಪೇತ್ರನು, ಯೇಸುವಿನ ಕುರಿತಾಗಿ ಮಾಡಿದ ಪ್ರಸಂಗದ ಘೋಷಣೆ (2:22-40)

ವಚನ 22ರಲ್ಲಿ, ಪ್ರಸಂಗವು ತಾನೇ ಆರಂಭವಾಗಿದೆ. ಹಾಗೂ ಪೇತ್ರನು ಪಂಚಾಶತ್ತಮದ ಪರಿಣಾಮಗಳನ್ನು ಈಗಾಗಲೇ ವಿವರಿಸಿದ್ದನು. "ಇಸ್ರಾಯೇಲ್ಯರೇ, ನನ್ನ ಮಾತುಗಳನ್ನು ಆಲಿಸಿರಿ," "ನಜರೇತಿನ ಯೇಸು ಇದ್ದನಲ್ಲಾ" ಎಂಬ ಪೀಠಿಕೆಯನ್ನು ಹಾಕಿರುವನು.

ಪೇತ್ರನ ಪ್ರಸಂಗದ ಮುಖ್ಯಾಂಶವು ಸರಳವಾಗಿದೆ. "ದೇವರು ನಿಮಗೂ ತಿಳಿದಿರುವಂತೆ ಆತನ ಕೈಯಿಂದ ಮಹತ್ತುಗಳನ್ನು, ಅದ್ಭುತಗಳನ್ನೂ ಸೂಚಕ ಕಾರ್ಯಗಳನ್ನೂ ನಿಮ್ಮಲ್ಲಿ ನಡೆಸಿರುವನು" ಎಂದು ಯೇಸುವನ್ನು ಪರಿಚಯಿಸಿದನು. ಈ ಘಟನೆಯನ್ನು ಜನರು ನಿರಾಕರಣೆ ಮಾಡುವದು ಅಸಾಧ್ಯವಾಗಿತ್ತು (ವಚನ 22). ಯೇಸುವನ್ನು ನಿಯಮ ಬಾಹಿರವಾಗಿ ಕೊಂದರು ಎಂದು ಪೇತ್ರನು ಹೇಳಿ, ನೀವು ಅದಕ್ಕೆ ಕಾರಣ: "ನೀವು ಅನ್ಯಜನರ ಕೈಯಿಂದ ಆತನನ್ನು ಶಿಲುಬೆಗೆ ಹಾಕಿಸಿ ಕೊಂದಿರಿ" (ವಚನ 23). ತಾಂತ್ರಿಕವಾಗಿ ರೋಮಾಯರೇ ಯೇಸುವನ್ನು ಕೊಂದಿದ್ದರೂ, ಅವರು ಇದನ್ನು ಧಾರ್ಮಿಕ ನಾಯಕರ ಹಾಗೂ ಯೆಹೂದ್ಯ ಗುಂಪಿನವರ ಬಯಕೆಯ ಪ್ರಕಾರವೇ ಮಾಡಿದ್ದರು. "ನಂತರದಲ್ಲಿ ಪೇತ್ರನು" ಆ ಯೇಸು ದೇವರ ಸ್ಥಿರ ಸಂಕಲ್ಪಕ್ಕೂ ಭವಿಷ್ಯದ್ ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಲ್ಪಟ್ಟಿದ್ದನು ಅಂದನು. ಅವನು ಯೇಸುವಿನ ಮರಣವನ್ನು ಅಬದ್ಧವಾಗಿ ಪ್ರಕಟಿಸದೆ, ಆದಿಕಾಂಡ 3:15ರ ಪ್ರಕಾರದ ವಾಕ್ಯದ ನೆರವೇರಿಕೆ ಎಂದು ತೋರಿಸಿಕೊಟ್ಟನು, ಅದು ಮೆಸ್ಸೀಯನು ಬರುವನು ಎಂಬ ವಾಗ್ದಾನಕ್ಕೆ ಅನುಗುಣವಾಗಿತ್ತು. ಯೇಸು ಬರುವನು ಎಂಬ ಹಳೆ ಒಡಂಬಡಿಕೆಯಲ್ಲಿ ಮುಂದುವರೆಸಲಾಗಿದೆ. ಇವುಗಳೆಲ್ಲವು ದೇವರ ಸಮಯೋಚಿತವಾದ ಯೋಜನೆಯೇ.

ಪೇತ್ರನ ಮುಂದಿನ ಮಾತು ಪ್ರಮುಖಾಂಶವಾಗಿದೆ, ಅದಕ್ಕೆ ಗೊತ್ತುಪಡಿಸಿರುವ ಸಮಯಕ್ಕನುಗುಣವಾಗಿ ಯೇಸು ಕ್ರೂಜಿತನಾದ ನಂತರ ಎದ್ದು ಬಂದನು (24-35 ವಚನಗಳು). ಪುನರುತ್ಥಾನದ ಸಿದ್ಧಾಂಥಕ್ಕೆ ಪೇತ್ರನು ಕೀರ್ತನೆಗಳಲ್ಲಿರುವ ಎರಡು ಪುರಾವೆಗಳನ್ನು ನೀಡಿರುವನು. ಮೊದಲನೆಯದಾಗಿ, ಕೀರ್ತನೆ 16:8-11 ಅದನ್ನು ವಚನಗಳು 25-28ರ ವಾಕ್ಯದಲ್ಲಿ ತಿಳಿಸಿರುವನು: "ಯಾಕಂದರೆ ನಾನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲ" ಎಂಬುದು ಪ್ರಮುಖ ವಾಕ್ಯವಾಗಿದೆ (ವಚನ 27). ದಾವೀದನು ತನ್ನ ದೇಹವು ಸಮಾಧಿಯಾಗಿರುವ ಕುರಿತು ಇಲ್ಲಿ ಮಾತನಾಡಲಿಲ್ಲ. (ಪೇತ್ರನ ಸಮಯದಲ್ಲಿಯೂ ದಾವೀದನ ಸ್ಮಶಾನವು ಪ್ರಚಲಿತವಾಗಿತ್ತು. ಸಂಪ್ರದಾಯಿಕವಾದ ಸಮಾಧಿ ಎಂಬುದು ಪ್ರಶ್ನಾತೀತವಾಗಿದೆ.) ದಾವೀದನು ಕೇವಲ ಅರಸನು ಮತ್ತು ಕುರುಬನು ಆಗಿರದೆ, ಕ್ರಿಸ್ತನ (ಮೆಸ್ಸೀಯನ) ಕುರಿತು ಮುಂತಿಳಿಸಿದ ಪ್ರವಾದಿಯೂ ಆಗಿರುವನು. "... ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವದಿಲ್ಲ" ಎಂಬ ಮಾತನ್ನು ಪೇತ್ರನು ಹೇಳಿರುವನು (ಅಪೊಸ್ತಲರ ಕೃತ್ಯಗಳು 2:31). ತರುವಾಯ ಪೇತ್ರನು ಕೀರ್ತನೆ 110:1 ಪ್ರಕಾರವಾಗಿ, ಪುನರುತ್ಥಾನ ಹೊಂದಿದ ಮೆಸ್ಸೀಯನು ತಂದೆಯ ಬಲಪಾರ್ಶ್ವದಲ್ಲಿ ಆಸೀನನಾಗಿರುವನು ಎಂದು ಪ್ರಕಟಿಸಿ (ಆದಿ ಕ್ರೈಸ್ತರ ಪ್ರಮುಖ ವಾಕ್ಯ ಮತ್ತಾಯ 22:44; ಮಾರ್ಕ 12:36; ಲೂಕ 20:42, 43; ಇಬ್ರಿಯ 1:13). "ಕರ್ತನು" ಎಂಬ ದಾವೀದನ ಪದದಲ್ಲಿ ಮತ್ತೊಬ್ಬ ವ್ಯಕ್ತಿಯನ್ನು ಕುರಿತು "ಕರ್ತನು" ಎಂದು ಹೇಳಲಾಗಿದೆ. ನಾನು ನಿನ್ನ ವಿರೋಧಿಗಳನ್ನು ನಿನ್ನಪಾದಗಳಿಗೆ ಪೀಠವಾಗ ಮಾಡುವ ತನಕ ತನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬದೆ (ಅಪೊಸ್ತಲರ ಕೃತ್ಯಗಳು 2:34, 35). ಇದು ಪೇತ್ರನ ಪ್ರಸಂಗದ ಮುಖ್ಯಾಂಶವಾಯಿತು: "ಅದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ" (ವಚನ 36). ಕ್ರೂಜಿತನಾದ ಯೇಸುವನ್ನು ಮಾತ್ರ "ಒಡೆಯನು" ಹಾಗೂ ಮೆಸ್ಸೀಯನೆಂದು ಉಚ್ಚರಿಸಬಹುದು. ಇಸ್ರಾಯೇಲ್ಯರ ಪುನಃ ಸ್ಥಾಪನೆ ಹಾಗೂ ರಕ್ಷಣೆಗಾಗಿ ಆತನೇ ನಿರೀಕ್ಷೆ ಎಂಬದು ಸ್ಪಷ್ಟವಾಯಿತು. ಆದರೆ ಆತನ ಜನರೇ ಆತನನ್ನು ಶಿಲುಬೆಗೆ

ಹಾಕಿದ್ದರು.

ಇಲ್ಲಿ ಪೇತ್ರನೇ ತನ್ನ ಪ್ರಸಂಗವನ್ನು ಅಂತ್ಯಮಾಡಿದ್ದನೇ, ಅಥವಾ ಅವನ ಕೇಳುಗರೇ ಮಧ್ಯಪ್ರವೇಶಿಸಿದರೇ ಎಂಬುದು ಸ್ಪಷ್ಟವಿಲ್ಲ. ಅವನ ಮಾತುಗಳು ವಿಶೇಷವಾದ ಪರಿಣಾಮವನ್ನು ಬೀರಿತ್ತು. ವಚನ 37ರಲ್ಲಿ, "ಇದನ್ನು ಕೇಳಿ ಅವರ ಹೃದಯದಲ್ಲಿ ಅಲಗು ನೆಟ್ಟಂತಾಯಿತು." ಅವರ ಅಂತರಾಳದಲ್ಲಿ ಆಳವಾದ ವೇದನೆ ಹಾಗೂ ಮಾನಸಾಂತರ ಎಂಬದೆ. ಇದರ ಪರಿಣಾಮವಾಗಿ, ಅವರು "ನಾವೇನು ಮಾಡಬೇಕು?" ಅಂದರು. ಅವರ ಅಪಾರವಾದ ಪಾಪಕ್ಕಾಗಿ, ಪಾಪಕ್ಷಮೆಯನ್ನು ಅವರು ಬಯಸಿದ್ದರು. ಪೇತ್ರನ ಉತ್ತರವು ನಿಸ್ಸಂದೇಹವಾಗಿ ಸ್ಪಷ್ಟವಾಗಿತ್ತು: ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಕೊಳ್ಳಿರಿ. "ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ" (ವಚನ 38). ಅವರ ಪ್ರಶ್ನೆಯಲ್ಲಿ ಪ್ರಾಮುಖ್ಯತೆಯಿತ್ತು, ಅದಕ್ಕೆ ಪೇತ್ರನ ಉತ್ತರವು ಸ್ಪಷ್ಟವಾಗಿಯೂ ಬಲವಾಗಿಯೂ ಇತ್ತು. ನಾವುಗಳು ಸಹ ಇಂತಹ ಪ್ರಶ್ನೆಯನ್ನು ಕೇಳಿ, ಅಲ್ಲಿದ್ದ ಉತ್ತರಕ್ಕೆ ಮನಸ್ಸು ನೀಡಬೇಕು.

"ಮಾನಸಾಂತರ" ಅಂದರೆ, ಪಾಪದಿಂದ ದೇವರ ಕಡೆಗೆ ತಿರುಗಿಕೊಳ್ಳುವದು. ದೇವರ ಕಡೆಗೆ ತಿರುಗಿಕೊಳ್ಳುವ ವಿಚಾರದಲ್ಲಿ ಒಬ್ಬ ಪಾಪಿಯು ಅಲಕ್ಷವಾಗಿರಬಾರದು, ಅದಕ್ಕೆ ಅಗತ್ಯವಾದದ್ದನ್ನು ಮಾಡಲೇಬೇಕು. ಮಾನಸಾಂತರವು ಕೇವಲ ಅಂತರಾಳದ ಭಾವನೆ ಮಾತ್ರ ಆಗಿರದೆ, ಸಕಾರಾತ್ಮಕವಾದ ನಿರ್ಧಾರವಾಗಿರಬೇಕು. ಪೇತ್ರನು, ಅವರಿಗೆ "ನಿಮ್ಮಲ್ಲಿ ಪ್ರತಿಯೊಬ್ಬನು ದೀಕ್ಷಾಸ್ನಾನಮಾಡಿಸಿಕೊಳ್ಳಿರಿ ಅಂದನು." ದೀಕ್ಷಾಸ್ನಾನವನ್ನು ಆಯ್ಕೆ ಎಂಬುದಾಗಿ ತಿಳಿಸದೆ, ಅದು ಮಾಡಲೇಬೇಕಾದ ಸಂಗತಿಯಾಗಿತ್ತು. "ಅದು ಪಾಪಕ್ಷಮೆಗೆ" ಅಗತ್ಯವಾದ ಸಂಗತಿಯಾಗಿದ್ದರಿಂದ, ಅದರ ಉದ್ದೇಶದಲ್ಲಿ ಯಾವುದೇ ಆಶ್ಚರ್ಯವಿರುವದಿಲ್ಲ. ಅದನ್ನು ಅದರಲ್ಲಿ ಯೇಸು ಕ್ರಿಸ್ತನ ಹೆಸರಿನಲ್ಲಿ ಮಾಡಬೇಕಾದ್ದರಿಂದ, ಆತನ ಅಧಿಕಾರವು ಹಾಗೂ ರಕ್ಷಣೆಯು ಅದರಲ್ಲಿ ಒಳಗೊಂಡಿತ್ತು ಎಂಬ ಸೂಚನೆಯಿದೆ.

ಈ ಅಪ್ಪಣೆಯೊಂದಿಗೆ ಒಂದು ವಾಗ್ದಾನವು ಸಹ ಸೇರಿದೆ: "... ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ" ಪವಿತ್ರಾತ್ಮ ದಾನವನ್ನು ಪವಿತ್ರಾತ್ಮನು ನೀಡದೆ, ಪವಿತ್ರಾತ್ಮನು ತಾನೇ ಒಂದು ವರವಾಗಿದ್ದಾನೆ (ನೋಡಿರಿ ಅಪೊಸ್ತಲರ ಕೃತ್ಯಗಳು 5:32; 8:14-16; ಲೂಕ 11:10-13). ಪ್ರತಿಯೊಬ್ಬರ ಮೇಲು ಪವಿತ್ರಾತ್ಮನು ಸುರಿಸಲ್ಪಡುವನು ಎಂಬ ಯೋವೇಲನ ಪ್ರವಾದನೆಗೆ ಹೋಲಿಕೆಯಾದದ್ದನ್ನೇ ಪೇತ್ರನು ತಿಳಿಸಿದನು. ಈ ಎಲ್ಲರಿಗೂ ಆ ಆತ್ಮವು ದೊರಕಿರುತ್ತದೆ, ಪ್ರತಿಯೊಬ್ಬನು ಮಾನಸಾಂತರಪಟ್ಟು, ದೀಕ್ಷಾಸ್ನಾನ ಹೊಂದುವದರ ಮುಖಾಂತರ ಆತ್ಮನನ್ನು ದೊರಕಿಸಿಕೊಳ್ಳಬಹುದು. ವಚನ 39ರಲ್ಲಿ, ಆ ದಿನದಲ್ಲಿ ಸೇರಿ ಬಂದವರಿಗೆ ಮಾತ್ರ ರಕ್ಷಣೆ ಹಾಗೂ ಆತ್ಮನ ವರ ಲಭ್ಯವಾಗದೆ, ಮಾನಸಾಂತರ ಹೊಂದಿ ದೀಕ್ಷಾಸ್ನಾನ ಹೊಂದಿದವರಿಗೂ ಲಭ್ಯವಿರುತ್ತದೆ ಮತ್ತು ಮುಂದಿನ ಯೆಹೂದ್ಯ ಪೀಳಿಗೆಯ ವಿಶ್ವಾಸಿಗಳಿಗೂ, "ದೊರದಲ್ಲಿರುವವರೆಲ್ಲರಿಗೂ" ಅದು ಲಭ್ಯವಾಯಿತು (ಅನ್ಯರಿಗೂ) ಈ ಶ್ರೇಷ್ಟವಾದ ದಾನದಿಂದ ಯಾರನ್ನು ಹೊರತುಪಡಿಸಿರುವದಿಲ್ಲ, ಹಾಗೂ ಪೇತ್ರನು ದೇವರಿಂದ ಹೊಂದಿ ಜನರಿಗೆ ನೀಡಿದ ಅಪ್ಪಣೆಯಿಂದಲೂ ಯಾರೂ ಸಹ ಹೊರತಾಗಿರುವದಿಲ್ಲ.

ಪೇತ್ರನು ಹೇಳಿರುವ ಇತರೆ ವಿಷಯಗಳೇನು ಎಂದು ನಾವುಗಳು ಊಹೆ ಮಾಡಬಹುದು, ಲೂಕನು ಅದನ್ನು ಸಂಕ್ಷಿಪ್ತವಾಗಿ ತಿಳಿಸಿ, "ಬೇರೆ ಅನೇಕವಾದ ಮಾತುಗಳಿಂದ ಅವನು ಖಂಡಿತವಾಗಿ ಸಾಕ್ಷಿ ನುಡಿದನು" (ವಚನ 40ಎ). ಅಪೊಸ್ತಲರ ಕೃತ್ಯದಲ್ಲಿರುವ ಇತರೆ ವಿಚಾರಗಳಂತೆ, ಈ ಸಂಗತಿಯು ಸಂಕ್ಷಿಪ್ತವಾಗಿದೆ, ಮತ್ತು ಅದು ಪೂರ್ಣವಾದ ಅನುವಾದ ಹೊಂದಿರುವದಿಲ್ಲ. "ಪೇತ್ರನ ಬೇರೆ ಅನೇಕವಾದ ಮಾತುಗಳಲ್ಲಿ" ರಕ್ಷಣೆಯ ಮಾತುಗಳು ಮಾತ್ರ ಅಡಕವಾಗಿರದೆ, ಮತ್ತು ರಕ್ಷಣೆಯ ಅವಕಾಶವನ್ನು ಯಾರೂ ಸಹ ಕಳಕೊಳ್ಳಬಾರದು

ಎಂಬುದಾಗಿಯೂ ಇರುತ್ತದೆ. “ವಕ್ರಬುದ್ಧಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ!” ಎಂದು ಎಚ್ಚರಿಸಿದನು (ವಚನ 40ಬಿ). ಮುಂದೆ ಬರಲಿರುವ ದೈವ ಕೋಪದಿಂದ ತಪ್ಪಿಸಿಕೊಂಡು, ರಕ್ಷಣೆಯ ಆನಂದವನ್ನು ಪಡೆಯಿರಿ ಎಂಬ ಸಂದೇಶವನ್ನೂ ತನ್ನ ಕೇಳುಗರಿಗೆ ನೀಡಿದನು, ಈ ವಿಚಾರವು ಈ ದಿನಗಳಲ್ಲೂ ಸತ್ಯವಾಗಿದೆ.

ಯೇಸುವಿನ ಸುವಾರ್ತೆಯಲ್ಲಿ ಪೇತ್ರನು ನೇರವಾಗಿ ತಿಳಿಸಿ, ಮಾನಸಾಂತರ ಪಡೆದು, ದೀಕ್ಷಾಸ್ನಾನ ಹೊಂದಿಕೊಳ್ಳಿರಿ ಎಂದು ತಿಳಿಸಿರುವನು. ಯೇಸುವಿನ ಕುರಿತು ಪ್ರಸಂಗ ಮಾಡುವಾಗ, ಆತನನ್ನು ಹೇಗೆ ಅಂಗೀಕರಿಸಿಕೊಳ್ಳಬೇಕು, ಎಂಬ ಸತ್ಯವನ್ನು ಪ್ರಕಟಿಸ ಬೇಕು, ಇಲ್ಲವಾದರೆ, ಕೇಳುಗರು ಬಲವಾದ ಸಂದೇಶವನ್ನು ಕೇಳಿದ್ದರೂ, ಆ ವಾಗ್ದಾನವನ್ನು ಸ್ವೀಕರಿಸುವದು ಕಷ್ಟಕರವಾಗುತ್ತದೆ. ಪೇತ್ರನ ಮಾತುಗಳನ್ನು ಹೊರತುಪಡಿಸಿ, ಬೇರೆ ಯಾವ ಮಾತನ್ನು ನಾವು ಜನರಿಗೆ ತಿಳಸಲು ಸಾಧ್ಯವಿದೆ? ಕೇವಲ ಜನರು ಪ್ರಾರ್ಥಿಸಿ ರಕ್ಷಣೆಯನ್ನು ಹೊಂದಬೇಕು ಎಂದು ತಿಳಿಸದೆ, ಪಂಚಾಶತ್ತಮ ದಿನದಲ್ಲಿ ಪ್ರಸಂಗಿಸಿದ ಸಂದೇಶವನ್ನು ನಾವುಗಳು ಸಾರಬೇಕು (ರಕ್ಷಣೆ ಪಡೆಯಲು ಪ್ರಾರ್ಥಿಸಿ ಹೊಂದಿರಿ ಎಂದು ಅಪೊಸ್ತಲರ ಕೃತ್ಯದಲ್ಲಿ ಹೇಳಿರುವದಿಲ್ಲ). ಅಪೊಸ್ತಲರು ಪ್ರಸಂಗಿಸಿದ ಕ್ರೂಜೆಯ ಹಾಗೂ “ಪುನರುತ್ಥಾನದ ಸಂದೇಶವು ಇನ್ನೂ ಜಿವಂತವಾಗಿದ್ದರೆ … ಮಾನಸಾಂತರ ಹಾಗೂ ದೀಕ್ಷಾಸ್ನಾನ” ಎಂಬ ಅಪೊಸ್ತಲರ ಸಂದೇಶವನ್ನು ನಾವಗಳು ಸಾರಲೇಬೇಕು.

## ಪ್ರಸಂಗದ ಪರಿಣಾಮ: ಸಭೆಯ ಆರಂಭ (2:41-47)

ವಚನ 41ರ, ಪೇತ್ರನ ಅಪ್ಪಣೆಗೆ ಸುಮಾರು ಮೂರು ಸಾವಿರ ಜನರು ಪ್ರತಿಕ್ರಿಯಿಸಿದರು. ಅವನ ಪ್ರಸಂಗವನ್ನು ನಂಬಿ, ಅಂಗೀಕರಿಸಿದ್ದರ ಪರಿಣಾಮವಾಗಿ, ಅನೇಕ ಜನರು ದೀಕ್ಷಾಸ್ನಾನ ಮಾಡಿಸಿಕೊಂಡರು. “ಚರ್ಚ್” ಎಂಬ ಪದಪ್ರಯೋಗವನ್ನು ಅಪೊಸ್ತಲರ ಮತ್ತು ಈ ವಚನದಲ್ಲಿ ಕಾಣದಿದ್ದರೂ (ಅಪೊಸ್ತಲರ ಕೃತ್ಯಗಳು 2ರಲ್ಲಿ ಅನುವಾದಕರು ಸೇರಿಸಿರುವರು) ಈ ಜನರ ದೀಕ್ಷಾಸ್ನಾನದ ನಿಮಿತ್ತ ಸಭೆಯ ಆರಂಭವನ್ನು ನೋಡುತ್ತೇವೆ, ಪರಿವರ್ತನೆಗೊಂಡವರನ್ನು “ಸಭೆ” ಅಥವಾ “ಚರ್ಚ್” ಎಂದು ಕರೆದರು (ಅಪೊಸ್ತಲರ ಕೃತ್ಯಗಳು 8:1; ನೋಡಿರಿ 5:11). ಹೊಸದಾದ ಈ ಜನರಿಗೆ ಇದೊಂದೆ ನಾಮಾಂಕಿತವಾಗಿ ರದೆ, ವಾಕ್ಯವು ಅವರನ್ನು “ವಿಶ್ವಾಸಿಗಳು” ಎಂದು ಕರೆಯುತ್ತದೆ (5:14; 4:32). “ಶಿಷ್ಯರು” (6:1; 9:26), “ಮಾರ್ಗ” (9:2), ಮತ್ತು “ಕ್ರೈಸ್ತರೂ” ಎಂದು ಕರೆಯ ಲಾಗಿದೆ (11:26).

ಸುವಾರ್ತಾ ಸಂದೇಶದಿಂದಲೂ, ಮತ್ತು ಅದಕ್ಕೆ ಉಂಟಾಗುವ ಸರಿಯಾದ ಪ್ರತಿಕ್ರಿಯೆಯಿಂದಲೂ ಸಭೆಯು ಉಂಟಾಗುತ್ತದೆ. ಹೊಸ ಒಡಂಬಡಿಕೆಗೆ ಅನುಗುಣವಾದ ಸಭೆಯು ಇದೇ ಆಗಿರುತ್ತದೆ - ಅದನ್ನು ಕೇಳಿದವರು, ಸಾರಲ್ಪಟ್ಟ ವಾಕ್ಯವನ್ನು ಕೇಳಿದವರು ಇದರಲ್ಲಿ ಒಳಗೊಂಡಿರುವರು, ವಚನ 42ರಲ್ಲಿ, ವಾಕ್ಯವನ್ನು ಕೇಳಿದ ತಕ್ಷಣ ಅವರುಗಳು ಆರಾಧಿಸುವ ಒಂದು ಸಂಘದವರಾದರು, ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ, ಸಹೋದರರ ಅನ್ಯೋನ್ಯತೆಯಲ್ಲಿಯೂ, ರೊಟ್ಟಿ ಮುರಿಯುವದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು. ರೊಟ್ಟಿ ಎಂದರೆ “ಕರ್ತನ ಭೋಜನ,” “ಪ್ರಾರ್ಥನೆ” (ESV) ಅಂದರೆ ವೈಯಕ್ತಿಕವಾಗಿರದ ಸಮೂಹ ಪ್ರಾರ್ಥನೆ. ವಚನ 43-46ರಲ್ಲಿ ಅವರು ದೊಡ್ಡ ಸಮೂಹವಾಗಿದ್ದರೂ, ಒಂದು ಒಗ್ಗಟ್ಟಿನ ಅನ್ಯೋನ್ಯತೆಯಲ್ಲಿದ್ದು ತಮ್ಮಲ್ಲಿದ್ದದ್ದನು ಹುದುವಾಗಿ ಹಂಚಿಕೊಂಡು ಔದಾರ್ಯವನ್ನು ತೋರಿದರು ಎಂಬ ಸೂಚನೆಯಿದೆ. ಈ ದಿನಗಳ ಸಭೆಗಳು ಅನುಸರಿಸಬೇಕಾದ, ಉತ್ತಮವಾದ ನಿದರ್ಶನವನ್ನು ಆದಿಸಭೆಯವರು ನೀಡಿರುವರು. ವಚನ 47ರಂತೆ, ಆ ಕ್ರಿಯೆಗಳು ಮುಂದುವರೆದು, ಅದರ ಪರಿಣಾಮವಾಗಿ ಅನೇಕರು ಪರಿವರ್ತನೆಗೊಳ್ಳುತ್ತಿದ್ದರು. ಪಂಚಾಶತ್ತಮ ದಿನದಲ್ಲಿ ಜರುಗಿದ ಕ್ರಿಯೆಯು ಅದು ಅಲ್ಲಿಗೆ ಅಂತ್ಯಗೊಳ್ಳದೆ, ಇನ್ನೂ ಮುಂದುವರೆಯುತ್ತಿದೆ.

ಇಲ್ಲಿರುವ ಸಭೆಯ ಕುರಿತು ಬರೆಯಲು ಸ್ಥಳಾವಕಾಶವಿರುವದಿಲ್ಲ. ಸಭೆ ಏನು ಎಂಬುದರ ವಿಚಾರದಲ್ಲಿ ಉಂಟಾಗಿರುವ ಗೊಂದಲವನ್ನು ಈ ಅಧ್ಯಾಯವು ಸ್ಪಷ್ಟೀಕರಿಸುತ್ತದೆ.

ಮೊದಲನೆಯದಾಗಿ, ಅಪೊಸ್ತಲರ ಕೃತ್ಯಗಳು 2ರಲ್ಲಿರುವಂತೆ ರಕ್ಷಣೆ ಮತ್ತು ಸಭೆಯ ನಡುವಿನ ಸಂಬಂಧವು ಅದು ಕ್ರೈಸ್ತ ಸಭೆಗೆ ಆಯ್ಕೆಯು ಪ್ರತಿಕ್ರಿಯೆಯಲ್ಲಿ ಎಂದು ತೋರಿಸಿ ಕೊಡುತ್ತದೆ, ಆದರೆ ಕೆಲವರು ಆ ರೀತಿ ಭಾವಿಸುತ್ತಾರೆ. ಉಳಿದ ಹೊಸ ಒಡಂಬಡಿಕೆಯಲ್ಲೂ ಹಾಗೂ ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ತಿಳಿಸಿರುವಂತೆ ನಂಬಿದವರು ಸಭೆಯಲ್ಲಿರ ಬೇಕು; ಅನ್ಯೋನ್ಯತೆಯ ಅಗತ್ಯವಿಲ್ಲದ ಏಕಾಂಗಿ ವಿಶ್ವಾಸಿ ಎಂಬುದಾಗಿರುವದಿಲ್ಲ, ಬೋಧನೆ ಹಾಗೂ ಪ್ರೋತ್ಸಾಹವನ್ನು ಸಭೆಯು ನೀಡುತ್ತದೆ.

ಎರಡನೆದಾಗಿ, ಸಭೆ ಅಂದರೆ ಒಬ್ಬನ ನಾಯಕತ್ವದ ಹಂಗಿನಲ್ಲಿರುವಂಥದ್ದು ಎಂಬದಲ್ಲ. ಅಪೊಸ್ತಲರ ಕೃತ್ಯಗಳು 2ರಲ್ಲಿ ಅಂತಹ ನಾಯಕತ್ವ ಇಲ್ಲದೆ ಇದ್ದರು, ಸಭೆಯು ಅಸ್ತಿತ್ವದಲ್ಲಿತ್ತು. ಈ ದಿನಗಳಲ್ಲಿ ನಾವು ಗಮನಿಸಿರುವಂತೆ, ಸಭೆಯಲ್ಲಿ ನಂಬಿಕೆ ಇರಲಿ ಅಥವಾ ಇಲ್ಲದಿರಲಿ, ಅದರಲ್ಲಿ ನಾಯಕತ್ವದ ಪ್ರಭುತ್ವ ಇರುತ್ತದೆ, ಅದು ಹೊಸ ಒಡಂಬಡಿಕೆಯ ಪ್ರಕಾರದ ಸಭೆಯಲ್ಲ.

ಮೂರನೆಯದಾಗಿ, ಸಭೆಯು ಮನುಷ್ಯನ ಸಿದ್ದಾಂಥ ಹಾಗೂ ಒಂದು ಸಂಘ ಪರಿವಾರದಿಂದ ಸ್ಥಾಪನೆಗೊಂಡದ್ದಲ್ಲ. ವಿಮೋಚನೆ ಹೊಂದಿದವರು, ಹೊಸ ಒಡಂಬಡಿಕೆಯ ಸಭೆಯಾಗಿದ್ದಾರೆ. ಸುವಾರ್ತೆಯನ್ನು ಕೇಳಿ ವಿಧೇಯರಾದವರಿಂದ ಸ್ಥಾಪನೆಗೊಂಡ ಸಭೆಯಾಗಿದೆ ಎಂದು ದೇವರಿಂದ ಉಂಟಾದದ್ದಾಗಿದೆಯೇ ವಿನಃ ಮಾನವ ಸಂಕಲ್ಪದಿಂದ ಉಂಟಾಗಿರುವದಿಲ್ಲ.

ಅಂತಿಮವಾಗಿ, ಸಭೆಯು ಜನರನ್ನು ರಕ್ಷಿಸುವದಿಲ್ಲ. ವಚನ 41 ಮತ್ತು 47ರಲ್ಲಿ ದೇವರು ತಾನೇ ಆತ್ಮಗಳನ್ನು ಸಭೆಗೆ ಸೇರಿಸುತ್ತಾನೆ; ಈ ವಿಧವಾಗಿ ರಕ್ಷಿಸಲ್ಪಟ್ಟವರು ಸಭೆಯಾಗಿದ್ದಾರೆ. ಯಾಕಂದರೆ ಜನರು ಸಭೆಯಲ್ಲಿರುವದರಿಂದ ಅವರಿಗೆ ರಕ್ಷಣೆಯುಂಟಾಗುವದಿಲ್ಲ. ರಕ್ಷಣೆಗೆ ಮೂಲ ಸುವಾರ್ತೆ, ಅದರ ಪರಿಣಾಮವೇ ಸಭೆ. ಈ ಒಂದು ವ್ಯತ್ಯಾಸವನ್ನು ನಾವು ಗಮನಿಸಬೇಕು, ಮತ್ತು ಯಾವುದೇ ರಕ್ಷಣೆಯು ಮಾನವನ ಇಚ್ಛೆಯಿಂದ ಉಂಟಾಗದೆ, ದೈವೀಕವಾಗಿರುತ್ತದೆ.

## ಮುಕ್ತಾಯ

ಪಂಚಾಶತ್ತಮ ದಿನವು ಮೆಸ್ಸೀಯನ "ಕಡೆಯ ದಿವಸಗಳು" ಎಂಬ ಹೊಸ ಶಕೆಯನ್ನು ಆರಂಭಿಸಿತು. ಯೇಸು ಪುನಃ ಬರುವವರೆಗೆ "ಈ ಕಡೇಯ ದಿವಸಗಳು" ಎಂಬುದು ಕ್ರೈಸ್ತರಲ್ಲಿ ಮುಂದುವರೆಯುತ್ತದೆ (ಇಬ್ರಿಯ 1:2). ದೇವರು ತನ್ನ ರಕ್ಷಣೆಯ ಯೋಜನೆಯ ಪೂರ್ತಿಗೊಳ್ಳುವವರೆಗೆ ಮುಂದುವರೆಯುತ್ತದೆ. ಈಗ ನಾವುಗಳು ಒಂದು ಹೊಸ ಇಸ್ರಾಯೇಲ್ಯ ರಾಗಿ ಜೀವಿಸುವ ಅವಕಾಶವನ್ನು ಹೊಂದಿದ್ದೇವೆ (ಗಲಾತ್ಯ 6:15, 16). ಯೇಸು ಎಂಬ ಮೆಸ್ಸೀಯನಿಂದ ವಿಮೋಚನೆ ಹೊಂದಿರುವವರು, ದೇವರ ಆತ್ಮನ ಬಲವನ್ನು ಹೊಂದಿದವ ರಾಗಿ, ಆತನ ಸಭೆಯಾಗಿರುವ ಅವಕಾಶವನ್ನು ಹೊಂದಿರುತ್ತಾರೆ.

---

## ಅಪೊಸ್ತಲರ ಕೃತ್ಯಗಳು 2 ಮತ್ತು ಇತರೆ ಭಾಗದಲ್ಲಿರುವ "ಅನ್ಯಭಾಷೆಗಳ" ವಿವರ

ಪಂಚಾಶತ್ತಮ ದಿನದಲ್ಲಿ "ಉಂಟಾದ" ಅನ್ಯಭಾಷೆಯ ವಿಚಾರದಲ್ಲಿ ಅನೇಕ ವಿಧವಾದ ಚರ್ಚೆಗಳ ಅಂಶಗಳು ಉಂಟಾಗಿವೆ. 1 ಕೊರಿಂಥ 12-4 ರಲ್ಲಿ ಕಾಣುವ ವಿಚಾರವು ಇದಕ್ಕೆ ಸಂಬಂಧ ಪಟ್ಟಿದೆಯೇ ಎಂಬ ಪ್ರಶ್ನೆಯಿದೆ.

ಗ್ರೀಕ್‌ನ "ಗ್ಲೋಸ್" ಅಂದರೆ "ನಾಲಿಗೆ" ಮಾತನಾಡುವ ಅಂಗ ಅಥವಾ ಭಾಷೆ.

ಅಪೊಸ್ತಲ ಕೃತ್ಯಗಳು 2ರಲ್ಲಿ ಸರಳವಾಗಿ ಅಸ್ತಿತ್ವದಲ್ಲಿದ್ದ ಭಾಷೆಯನ್ನೆ ಮಾತನಾಡಿದರು ಅದು ಅವರಿಗೆ ಪರಕೀಯ ಭಾಷೆಯಾಗಿತ್ತು. ಲೂಕನು ಪ್ರಯೋಗಿಸಿದ (*ಡಯಲಕ್ಟೋಸ್*; ವಚನ 6) "ಡಯಲಕ್ಟ್" ಪದದಲ್ಲಿ ಒಂದು ಭಾಷೆ ಎಂದು ನೋಡುತ್ತೇವೆ. ವಚನ 8ರಲ್ಲಿ ಸ್ಥಳೀಯರು ಆ ಭಾಷೆಯನ್ನು ಮಾತನಾಡಿದರು. ಅಪೊಸ್ತಲರ ಕೃತ್ಯಗಳು 2ರಲ್ಲಿ ಗ್ಲೊಸ ಮತ್ತು ಡಯಕ್ಟಸ್ ಎಂಬ ಪದಗಳನ್ನು ಸಮಯೋಚಿತವಾಗಿ ಬಳಸಲಾಗಿದೆ ಅಪೊಸ್ತಲರು ಈ ಅನ್ಯಭಾಷೆಗಳನ್ನು ಅದ್ಭುತವಾಗಿ ಹೊಂದಿದರು.

ಹೊಸ ಒಡಂಬಡಿಕೆಯ ಇತರ ಭಾಗದಲ್ಲಿರುವ ಅನ್ಯಭಾಷೆಯ ಕುರಿತೇನು? ಅಪೊಸ್ತಲರ ಕೃತ್ಯದಲ್ಲಿ ಮತ್ತೆರಡು ಬಾರಿ ಈ ಅಂಶವನ್ನು ನೋಡುತ್ತೇವೆ (10:46ರಲ್ಲಿ ಕೊರ್ನೇಲ್ಯ ಅವನ ಕುಟುಂಬದವರು 12 ಜನ ಎಫೆಸ ವಿಶ್ವಾಸಿಗಳು 19:6) ಇವೆರಡರಲ್ಲಿ ಒಂದೂ ಸಹ ಅಪೊಸ್ತಲರ ಕೃತ್ಯದಲ್ಲಿನಂತೆ ನಿರ್ಧಿಷ್ಟವಾಗಿರುವದಿಲ್ಲ, ಅದು ಬೇರೆ ವಿಧದಲ್ಲಿ ಇರಬೇಕು ಎಂಬ ನಿಯಮಗಳಿರುವದಿಲ್ಲ. ಸತ್ಯವೇದವನ್ನು ಸರಳವಾಗಿ ಅನುವಾದಿಸುವದೇ ಸುಲಭವಾದ ಅರ್ಥವನ್ನು ನೀಡುತ್ತದೆ (ಅಪೊಸ್ತಲರ ಕೃತ್ಯಗಳು 10; 19).

1 ಕೊರಿಂಥ 12-14 ರಲ್ಲಿಯೂ ಅನ್ಯಭಾಷೆಗಳ ಚರ್ಚೆಯಿದೆ, ಅವುಗಳು ನಿಜ ವಾದ ಅನ್ಯಭಾಷೆಯಾಗಿರದೆ, ಒಂದು ವಿಧವಾದ ಗುಣಗುಟ್ಟುವಿಕೆಯಾಗಿದೆ. ಇದರ ಕುರಿತು 3 ಅಧ್ಯಾಯಗಳಲ್ಲಿ ತಿಳಿಸಿರುವದಿಲ್ಲ. 1 ಕೊರಿಂಥ 14:9-11ರಲ್ಲಿ ಅನ್ಯಭಾಷೆಯ ಕುರಿತಾಗಿದೆ: ಅಪೊಸ್ತಲರ ಕೃತ್ಯಗಳು 2 ಪ್ರಕಾರದಲ್ಲಿದದ್ದು ಮನುಷ್ಯರ ಭಾಷೆಗಳೆ.

ಇದು ರಕ್ಷಣೆಗೆ ಸೂಚನೆಯಾಗಿರುವದಿಲ್ಲ.

---

## ಅಪೊಸ್ತಲರ ಕೃತ್ಯದಲ್ಲಿರುವ "ದೀಕ್ಷಾಸ್ನಾನ" ಹಾಗೂ "ಆತ್ಮ"

ಅಪೊಸ್ತಲರ 2:38ರಲ್ಲಿ ಮಾನಸಾಂತರ ಹಾಗೂ ದೀಕ್ಷಾಸ್ನಾನದ ನಂತರ ಪವಿತ್ರಾತ್ಮನ ಆಗಮನವಾಯಿತು ಎಂಬುದರಲ್ಲಿ ಪ್ರಶ್ನೆಗಳಿರುವದಿಲ್ಲ. ಇತರೆ ಭಾಗದಲ್ಲಿ ಇರುವ ಆತ್ಮನ ಆಗಮನವು ದೀಕ್ಷಾಸ್ನಾನಕ್ಕಿಂತ ಮೊದಲೇ ಆಗಿದ್ದರೂ, ಊರ್ಜಿತವಾಗುವದಿಲ್ಲ.

ಅಪೊಸ್ತಲರ ಕೃತ್ಯಗಳು 10ರಲ್ಲಿ, ಪೇತ್ರನು ದರ್ಶನವನ್ನು ಕಂಡು ರೋಮಾಯದ ಶತಾಧಿಪತಿಯಾದ ಕೊರ್ನೇಲ್ಯನನ್ನು ಸಂಧಿಸಿದನು. ಈಗಾಗಲೇ ಒಂದು ಸಾರಿ ಪೇತ್ರನು ಅವನಿಗೂ ಅವನ ಕುಟುಂಬದವರಿಗೂ ಸುವಾರ್ತೆಯನ್ನು ಸಾರಿದ್ದನು. ವಚನಗಳು 44-46ರಲ್ಲಿ, "ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ ಅವನ ವಾಕ್ಯವನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮ ವರವು ಇಳಿಯಿತು." ಆಗ ಪೇತ್ರನೊಂದಿಗಿದ್ದ ಸುನ್ನತಿಯವರಿಗೆಲ್ಲಾ ಆಶ್ಚರ್ಯವಾಯಿತು, ಯಾಕಂದರೆ ಅನ್ಯರೂ ಸಹ ಆತ್ಮನನ್ನು ಹೊಂದಿದ್ದರು. ನಡೆದ ಸಂಗತಿಯನ್ನು ಪೇತ್ರನು ನೋಡಿ - ನಮ್ಮ ಹಾಗೆಯೇ ಪವಿತ್ರಾತ್ಮವರವನ್ನು ಹೊಂದಿದ ಇವರಿಗೆ ನೀರಿನ ದೀಕ್ಷಾಸ್ನಾನವಾಗದಂತೆ ಯಾರಾದರು ಅಭ್ಯಾಂತರ ಮಾಡರೇ ಎಂದು ಹೇಳಿದನು. ಈ ಸಂಗತಿಗೂ ಅಪೊಸ್ತಲರ ಕೃತ್ಯಗಳು 2:38ಕ್ಕೂ ಇರುವ ವ್ಯತ್ಯಾಸವೇನು? ಅದು ಆ ಸಮಯಕ್ಕೆ ಅನುಗುಣವಾಗಿತ್ತು ಮೊಲನೆಯ ಸಾರಿ ಯೇಸುವಿನ ಶಿಷ್ಯನಾದ ಪೇತ್ರನು ಅನ್ಯರಿಗೆ ಸುವಾರ್ತೆಯನ್ನು ಸಾರಿದನು, ಆ ದಿನದ ಯಾವುದೇ ಕ್ರೈಸ್ತರು ಇದನ್ನು ಒಪ್ಪುವ ಸಾಧ್ಯತೆಗಳಿರಲಿಲ್ಲ. ನಂತರದಲ್ಲಿ ಪೇತ್ರನ ಈ ಪ್ರಸಂಗವೂ ಹಾಗೂ ಅವನು ನೀಡಿದ ದೀಕ್ಷಾಸ್ನಾನದ ಕುರಿತ ಚರ್ಚೆಯು ಯೆರೂಸಲೇಮಿನಲ್ಲಿ ನಡೆಯಿತು (ಅಪೊಸ್ತಲರ ಕೃತ್ಯಗಳು 11:1-18). ಅನ್ಯರಾದ ಪೆಂತಕೋಸ್ತದವರಿಗೆ, ಆತ್ಮನ ಆಗಮನ ಹಾಗೂ ಅನ್ಯ ಭಾಷೆಯ ಸಂಕೇತ ವಾಗಿದೆ. ಅಂದರೆ ಅನ್ಯರನ್ನು ದೇವರು ಅಂಗೀಕರಿಸಿದನು ಎಂದು ಯೆಹೂದ್ಯರಿಗೆ ಇದು ಪುರಾವೆ ಆಯಿತು (10:34, 35; 10:47 ಮತ್ತು 11:17).

ಅಪೊಸ್ತಲರ ಕೃತ್ಯಗಳು 8:14-17ರಲ್ಲಿ ಆತ್ಮನು ದೀಕ್ಷಾಸ್ನಾನದ ಸಮಯದಲ್ಲಾಗಲೀ,

ಅವರ ಹಿಂದೆಯಾಗಲಿ ಬಾರದೆ, ಅಪೊಸ್ತಲರು ಹಸ್ತವನ್ನಿಡುವದರ ಮೂಲಕ ಉಂಟಾಯಿತು. ಅಪೊಸ್ತಲರ ಕೃತ್ಯಗಳು 2:38 ರಂತೆ ಇಲ್ಲಿ ನಡೆಯದೆ, ಬೇರೆ ವಿಧದಲ್ಲಿ ಉಂಟಾಯಿತು. ಈ ವಿಧವಾಗಿ ಆತ್ಮನನ್ನು ಪಡೆದವರು ಸಮಾರ್ಯದವರು, ಯೆಹೂದ್ಯರಿಂದ ಪ್ರತ್ಯೇಕವಾಗಿದ್ದ ಅರ್ಧ ಯೆಹೂದ್ಯರು, ಅವರು ಅನ್ಯರಂತಿದ್ದರು. ಸಮಾರ್ಯರನ್ನು ಸಹ ದೇವರು ಸೇರಿಸಿಕೊಂಡನು ಎಂದು ಯೆಹೂದ್ಯರಿಗೆ ದೇವರು ನೀಡಿದ ಪುರಾವೆಯಾಗಿದೆ. ಅಪೊಸ್ತಲರು ಹಸ್ತವನ್ನಿಡುವ ಮೂಲಕ ಈ ಕಾರ್ಯ ಉಂಟಾಯಿತು.

ಯೋಹಾನ 3:5 ಮತ್ತು ತೀತ 3:5 ದೀಕ್ಷಾಸ್ನಾನ ಹಾಗೂ ಆತನಿಗೆ ಸಂಬಂಧ ಪಟ್ಟ ಇತರ ವಾಕ್ಯಗಳು.